

# ಕೇವಲ ಮರಣದ ನೆನಪೇ ನನಗೆ ಭಯವನ್ನುಂಟು ಮಾಡುತ್ತದೆ!

ಮಾನವನಿಗೆ ಮರಣವೇ ಅಂತ್ಯವೇ?
ಮರಣದಿಂದಾಚೆ ಏನಿದೆ?
ನನ್ನ ಭವಿಷ್ಯತ್ತೇನು ?
.... ಎಂದು ಚಿಂತಿಸುವಿರಾ ?

ಇಲ್ಲಿದೆ ಉತ್ತರ........

# ಈ ಲೋಕದಲ್ಲಿ ಒಬ್ಬ ಮನುಷ್ಯನಿದ್ದನು.

ಆತನು ಪಾಪರಹಿತನಾಗಿದ್ದನು...
ಆತನು ಮರಣ ಹೊಂದಿದನು...
ಆದರೆ ಆತನು ಪಾಪರಹಿತನಾಗಿದ್ದರಿಂದ ಮತ್ತೆ ಆತನು ಜೀವಿತನಾಗಿ ಎಬ್ಬಿಸಲ್ಪಟ್ಟನು.

**ಈಗ ಆತನು ಮತ್ತೆ ಸಾಯದ ಹಾಗೆ ಎಂದೆಂದಿಗೂ ಜೀವಿಸುವವನಾಗಿದ್ದಾನೆ**

## ಆತನೇ ಯೇಸು ಕ್ರಿಸ್ತನು....

ಆತನು ನಿಮಗೆ ಒಂದು ಸಂದೇಶವನ್ನು ನೀಡಿದ್ದಾನೆ....
"ಮರಣದ ಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ, ಅವರಂತೆ ರಕ್ತಮಾಂಸಧಾರಿಯಾದನು".

— ಇಬ್ರಿಯ 2:15

## ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು...

"ಅವನು ಅವರಿಗೆ – ಬೆರಗಾಗಬೇಡಿರಿ, ಶಿಲುಬೆಗೆ ಹಾಕಲ್ಪಟ್ಟಿದ್ದ ನಜರೇತಿನ ಯೇಸುವನ್ನು ಹುಡುಕುತ್ತೀರಲ್ಲವೇ? ಆತನು ಜೀವಿತನಾಗಿ ಎದ್ದಿದ್ದಾನೆ..."

— ಮಾರ್ಕ 16:6

## ಏಕೈಕ ಮಾರ್ಗ –

ಯೇಸು ಹೇಳಿದ್ದು :
"ನಾನೇ ಮಾರ್ಗವೂ, ಸತ್ಯವೂ, ಜೀವವೂ ಅಗಿದ್ದೇನೆ." — ಯೋಹಾನ 14:6

## ದೇವರ ಏರ್ಪಾಟು ...

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಹೊಂದ ಬೇಕೆಂದು ಆತನನ್ನು ಕೊಟ್ಟನು." — ಯೋಹಾನ 3:16

"ಯಾಕಂದರೆ ದೇವರು ನಮ್ಮನ್ನು ತನ್ನ ಕೋಪಕ್ಕೆ ಗುರಿಯಾಗಬೇಕೆಂದು ನೇಮಿಸದೆ ನಾವು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕವಾಗಿ ರಕ್ಷಣೆಯನ್ನು ಸಂಪಾದಿಸಿಕೊಳ್ಳ ಬೇಕೆಂದು ನೇಮಿಸಿದನು". — 1 ಥೆಸಲೋನಿಕ 5:9

"ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗ ಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ." — 2 ಪೇತ್ರ 1:14

## ಮಾನವ ಜನ್ಮ

"ನರ ಜಾತಿಯಲ್ಲಾ ಹುಲ್ಲಿನ ಹಾಗಿದೆ, ಅದರ ಲಾವಣ್ಯವೆಲ್ಲಾ ಅಡವಿಯ ಹೂವಿನಂತಿದೆ.... ಹುಲ್ಲು ಒಣಗಿ ಹೋಗುವದು; ಹೂವು ಬಾಡಿ ಹೋಗುವದು. ಜನವು ಹುಲ್ಲೇ ಹುಲ್ಲು."
— ಯೆಶಾಯ 40: 6-7

## ಮರಣದ ನಂತರ - ನ್ಯಾಯತೀರ್ಪು.

"ಯಾಕಂದರೆ ಆತನು (ದೇವರು) ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯ ವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ. ಅವನನ್ನು (ಯೇಸು ಕ್ರಿಸ್ತನನ್ನು) ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ ...."
ಅ.ಕೃ. 17:30.

"ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯ ಬೇಕು. ತನ್ನ ಶರೀರ ಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮನನ್ನು (ಆತ್ಮದಲ್ಲಿ) ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು."
— ಗಲಾತ್ಯ 6:7,8

"ಅದಕ್ಕೆ ಆಶ್ಚರ್ಯ ಪಡಬೇಡಿರಿ; ಸಮಾಧಿಗಳಲ್ಲಿರುವವರೆಲ್ಲರು ಆತನ (ಯೇಸುಕ್ರಿಸ್ತನ) ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು, ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ (ದಂಡನೆಗಾಗಿ) ಪುನರುತ್ಥಾನವಾಗುವದು." —
— ಯೋಹಾನ 5:28, 29

## ಈಗ ಮಾಡ ಬೇಕಾದದ್ದೇನು?

"ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು (ಜಾಗ್ರತೆಯಾಗಿ) ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ" — ಇಬ್ರಿಯ 11:6

"(ಯೇಸುಕ್ರಿಸ್ತನ ಸುವಾರ್ತೆಯನ್ನು) ನಂಬಿ, ದೀಕ್ಷಾಸ್ನಾನ ಮಾಡಿಸಿ ಕೊಳ್ಳುವವನು ರಕ್ಷಣೆ ಹೊಂದುವನು; (ಸುವಾರ್ತೆಯನ್ನು) ನಂಬದೇ ಹೋಗುವವನು ದಂಡನೆಗೆ ಗುರಿಯಾಗುವನು."
— ಮಾರ್ಕ 16:16

"ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ...... ನಾವೇನು ಮಾಡಬೇಕು ಎಂದು ಕೇಳಲು ಪೇತ್ರನು ಅವರಿಗೆ — ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು **ದೇವರ ಕಡೆಗೆ ತಿರುಗಿಕೊಂಡು** ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿ ಕೊಳ್ಳಿರಿ..."
— ಅ.ಕೃ. 2:37,38

## ಕ್ರಿಸ್ತನು ಈ ಲೋಕಕ್ಕೆ ಹಿಂದಿರುಗಿದಾಗ.....

"(ಸತ್ತವರೊಳಗಿಂದ ಎದ್ದು ಬಂದವರಲ್ಲಿ) ಕ್ರಿಸ್ತನು ಪ್ರಥಮ ಫಲ, ತರುವಾಯ ಆತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು."

"ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವದು...."
"ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿ ಕೊಂಡಾಗ ಮರಣಾಧೀನ ವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ.... ಮರಣವು ನುಂಗಿಯೇ ಹೋಯಿತು. ಜಯವಾಯಿತು." — 1 ಕೊರಿಂಥ 15:23, 26,54

"ಕರ್ತನಾದ ಯೇಸುವನ್ನು ಎಬ್ಬಿಸಿದಾತನು ನಮ್ಮನ್ನು ಸಹ ಯೇಸುವಿನೊಂದಿಗೆ ಎಬ್ಬಸಿ ನಿಮ್ಮ ಜೊತೆಯಲ್ಲಿ ತನ್ನಮುಂದೆ ನಿಲ್ಲಿಸುವನೆಂದು ತಿಳಿದವರಾಗಿದ್ದೇವೆ."
— 2 ಕೊರಿಂಥ 4:14

"ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಕಗಳಲ್ಲಿ ನಮಗುಂಟು" —
— 2 ಕೊರಿಂಥ 4:7

"ನಾವು ನಮ್ಮ ಮೇಲೆ ಭರವಸವಿಟ್ಟು ಕೊಳ್ಳದೆ ಸತ್ತವರನ್ನು ಎಬ್ಬಿಸುವ ದೇವರ ಮೇಲೆಯೇ ಭರವಸವಿಡುವವರಾಗ ಬೇಕೆಂದು ಹೀಗಾಯಿತು."
— 2 ಕೊರಿಂಥ 1:19

ಸೃಷ್ಟಿಕರ್ತನಾದ ದೇವರು ನಿಮಗೆ ಕಾದಿರಿಸಿರುವ ಈ ಭವ್ಯ ಭವಿಷ್ಯತ್ತಿನಲ್ಲಿ ಸೇರಲು ನಿಮಗೆ ಇಚ್ಛೆ ಇದೆಯೇ?

ಹಾಗಿದ್ದಲ್ಲಿ .......

- ವಿವರಗಳಿಗೆ ನಮಗೆ ಬರೆಯಿರಿ
- ಉಚಿತ ಅಂಚೆ ಶಿಕ್ಷಣಕ್ಕೆ ಬರೆಯಿರಿ
- "ಭೂಲೋಕದ ಮುಂದಣ ವೈಭವ" ಎಂಬ ಉಚಿತ ಪುಸ್ತಕಕ್ಕೆ ಬರೆಯಿರಿ
- ವೈಯಕ್ತಿಕ ಭೇಟಿಗಾಗಿ ಬರೆಯಿರಿ

ವಿಳಾಸ:
*ದಿ ಕ್ರಿಸ್ಟಡೆಲ್ಫಿಯನ್ ಪ್ರೀಚಿಂಗ್ ಕಮಿಟಿ-ಇಂಡಿಯ*
*ಕರ್ನಾಟಕ ವಲಯ ಸಮಿತಿ*
*ಅಂಚೆಪೆಟ್ಟಿಗೆ 4237, ಬೆಂಗಳೂರು - 560 042*

ಭೂಲೋಕದ ಮೇಲೆ ಆಳ್ವಿಕೆ ನಡೆಸಲು ಯೇಸು ಕ್ರಿಸ್ತನು ಶೀಘ್ರವೇ ಹಿಂದಿರುಗುತ್ತಾನೆ.